ನಿಧಾನವಾಗಿ ಸರಿಯುತ್ತಿತ್ತು. ಕರಮಚಂದನ ಮೊಗದಲ್ಲಿ ಆತಂಕ ಎದ್ದು ಕಾಣುತ್ತಿತ್ತು. ಕ್ಷಣಗಳು ಜಾರುತ್ತಿದ್ದಂತೆ ಆತನ ತಾಳ್ಮೆ ತಪ್ಪಿದಂತೆ ತೋರುತ್ತಿತ್ತು.

ಸುಮಾರು ಆರೂಕಾಲರ ಹೊತ್ತಿಗೆ ಬೈಕಿನ ಸದ್ದು ಕೇಳಿ ಬಂತು. ಕೆಲ ಕ್ಷಣಗಳಲ್ಲಿ ವ್ಯಕ್ತಿಯೊಬ್ಬ ಬೈಕಿನಲ್ಲಿ ಗುಡಿಯ ಬಳಿ ಬಂದು ನಿಲ್ಲಿಸಿ, ಅತ್ತ ಇತ್ತ ದೃಷ್ಟಿ ಹರಿಸಿ, ಮತ್ತೆ ತನ್ನ ಕೈಗಡಿಯಾರ ನೋಡಿಕೊಂಡ. ಮತ್ತೈದು ನಿಮಿಷಗಳಲ್ಲಿ ಇನ್ನೊಂದು ಬೈಕಿನಲ್ಲಿ ಇನ್ನೊಬ್ಬ ವ್ಯಕ್ತಿ ಆಗಮಿಸಿದ. ಅವರಿಬ್ಬರು ಪರಸ್ಪರ ಹಸ್ತಲಾಘವ ಮಾಡಿ, ಮಾತುಕತೆಗೆ ತೊಡಗಿದರು. ಆಗ ಕರಮಚಂದ ರಾಣೆಗೆ ಸನ್ನೆ ಮಾಡಿದ. ಮಿಂಚಿನಂತೆ ನಾವೆಲ್ಲರೂ ರಿವಾಲ್ವರ್ ಹಿಡಿದು ಅವರಿಬ್ಬರನ್ನೂ ಸುತ್ತುವರೆದೆವು.

"ಪಾದಯ್ಯ, ನಿನ್ನ ಆಟ ಇಲ್ಲಿಗೆ ಮುಗಿಯಿತು. ನೀವಿಬ್ಬರೂ ಪೊಲೀಸರ ಬಂದಿಗಳು. ಬಿಟ್ಟಂಗಾಲ ಸಹಕಾರಿ ಬ್ಯಾಂಕ್ ಕಳ್ಳತನ ಮಾಡಿದ್ದಕ್ಕೆ." ಕರಮಚಂದ ದನಿಯೇರಿಸಿ ಹೇಳಿದ.

ಅವರಿಬ್ಬರೂ ಗಾಬರಿಗೊಂಡಿದ್ದು ಅವರ ಮೊಗವೇ ಸಾರುತ್ತಿತ್ತು. ಅವರು ಇಂತಹ ಆಕ್ರಮಣವನ್ನು ನಿರೀಕ್ಷಿಸಿಯೇ ಇರಲಿಲ್ಲ. ಅವರಲ್ಲಿ ಸ್ಥೂಲಕಾಯದ ಆಸಾಮಿ ತುಟಿ ಬಿಚ್ಚಿದ,

"ಇದೆಲ್ಲಾ ಏನು? ನನ್ನ ಹೆಸರು ನಿಮ್ಗೆ ಹೇಗೆ ಗೊತ್ತಾಯಿತು?"

"ತೆಳ್ಳಗಿನವನು ಸಂಪಂಗಿ ಅಂತ ಊಹೆ ಮಾಡಿದೆ. ಯಾಕಂದ್ರೆ ಆ ಮನೆಯ ಮಾಡಿನಿಂದ ಈ ಸ್ಥೂಲಕಾಯ ಕೆಳಗಿಳಿಯಲು ಸಾಧ್ಯವಿಲ್ಲ. ಹಾಂ, ಸಂಪಂಗಿ ಉರುಫ್ ರಾಯರೆಡ್ಡಿ! ಸರಿಯಲ್ಲವೇ ಪಾದಯ್ಯ?" ಪಾದಯ್ಯ ತಲೆ ಆಡಿಸಿದ.

"ಮೂರು ತಿಂಗಳ ಹಿಂದೆ ಬಿಟ್ಟಂಗಾಲ ಸಹಕಾರಿ ಬ್ಯಾಂಕಿನಲ್ಲಿ ಲಾಕರ್ ಒಡೆದು, ಭಾರೀ ಕಳ್ಳತನವಾಗಿತ್ತು. ಚಿನ್ನ ಮತ್ತು ಹಣ ಕದ್ದೊಯ್ಯಲಾಗಿತ್ತು. ಅದ್ರಲ್ಲಿ ಎರಡು ಸಾವಿರ ಮುಖ ಬೆಲೆಯ ಇಪ್ಪತ್ತೈದು ಬಂಡಲ್ಲುಗಳೂ ಸೇರಿದ್ದವು. ಐವತ್ತು ಲಕ್ಷ ರೂಪಾಯಿಗಳು. ಅದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಹೊನ್ನರಾಜು ತನ್ನ ಬಾಡಿಗೆದಾರ ಎರಡು ಸಾವಿರದ ಹೊಸ ನೋಟುಗಳನ್ನು ಕೊಡ್ತಿದ್ದಾನೆ ಎನ್ನುವುದು ನನ್ನ ಅನುಮಾನವನ್ನು ಪುಷ್ಟೀಕರಿಸಿತ್ತು. ಸಂಪಂಗಿ ಯಾರಿಗೋ ಹೆದರುತ್ತಿದ್ದಾನೆಂಬುದು ಸ್ಪಷ್ಟ. ಯಾರಿಗೆ? ಯಾಕಾಗಿ? ಪೊಲೀಸರಿಂದ ಅವಿತು ಕುಳಿತಿರುವ ಸಾಧ್ಯತೆ ಕಮ್ಮಿ. ಯಾಕಂದ್ರೆ ಆ ರೀತಿ ವರ್ತಿಸಿದರೆ, ಯಾರಾದರೂ ಪೊಲೀಸರ ಗಮನಕ್ಕೆ ತಾರದೇ ಇರುತ್ತಾರೆಯೆ? ಮತ್ತು ಪೊಲೀಸರು ಹಾಗೆಲ್ಲ ನರಹಂತಕರಂತೆ ಬೆಂಬತ್ತಿ ದಾಳಿ ಮಾಡುವುದು ಕಮ್ಮಿ. ಹಾಗಾಗಿ ಆತ ಬೇರೆ ಯಾರಿಗೋ ಅಂಜಿ ಅಡಗಿದ್ದಾನೆ ಎಂದು ಊಹಿಸಿದೆ. ಆ ಕಳ್ಳತನದ ಶೈಲಿ ನೋಡಿ ಕುಖ್ಯಾತ ಕುಟ್ಟಿ ಗ್ಯಾಂಗಿನವರು ಮಾಡಿರುವ ಸಾಧ್ಯತೆಯಿದೆಯೆಂದು ಪತ್ರಿಕೆಗಳಲ್ಲಿ ಬಂದಿತ್ತು. ಆ ತಂಡವು ಬ್ಯಾಂಕ್ ಕಳ್ಳತನದಲ್ಲಿ ನಿಪುಣರು. ಸಂಪಂಗಿ ಅದೇ ಗ್ಯಾಂಗಿಗೆ ಸೇರಿದ್ದು, ಪ್ರಾಯಶಃ ಮೋಸ ಮಾಡಿ, ಹಣದೊಂದಿಗೆ ಪರಾರಿಯಾಗಿರಬೇಕೆಂದು ತರ್ಕಿಸಿದೆ. ಅಂತಹವರನ್ನು ಗ್ಯಾಂಗಿನವರು ಮುಗಿಸಲು ಹುಡುಕಾಡುತ್ತಿರುತ್ತಾರೆ. ಹಾಗಾಗಿ ಸಂಪಂಗಿ ಅಡಗಿಕೊಂಡೇ ಇದ್ದಿರಬೇಕೆಂದು ಭಾವಿಸಿದೆ. ಗ್ಯಾಂಗ್‌ಸ್ಟರುಗಳು ನಿರ್ದಾಕ್ಷಿಣ್ಯವಾಗಿರುತ್ತಾರೆ. ಸಂಪಂಗಿ ಅದಕ್ಕಾಗಿ ತುಂಬಾ ಹೆದರಿದ್ದ. ಯಾವಾಗಲೂ ಗ್ಯಾಂಗಿನಲ್ಲಿದ್ದವರು ತನ್ನ ಬಾಸ್‌ಗೆ ಮೋಸ ಮಾಡಿ ಬರುವಾಗ ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತೆ. ತನ್ನನ್ನು ಹಿಡಿಯಲು ಗ್ಯಾಂಗಿನಲ್ಲಿ ಯಾವ ರೀತಿಯ ಪ್ರಯತ್ನ ಸಾಗಿದೆ ಎಂಬುದರ ಮಾಹಿತಿ ಪಡೆಯಲು ವ್ಯವಸ್ಥೆ ಮಾಡಿಕೊಂಡಿರ್ತಾನೆ. ಕುಟ್ಟಿ ಗ್ಯಾಂಗ್ ಬಹಳ ಕುಖ್ಯಾತ. ಅದ್ರ ಕಿಂಗ್ ಪಿನ್ ಜೇಮ್ಸ್ ಕುಟ್ಟಿ ಕ್ರೂರಿ ಮತ್ತು ಚಾಣಾಕ್ಷ. ಬಹುಶಃ ಸರಿಯಾಗಿ ಹಣ ನೀಡದಿದ್ದಕ್ಕೋ ಅಥವಾ ಇನ್ನಾವುದೋ ಕಾರಣಕ್ಕೆ